# ಎಂಡೋಸಲ್ಫಾನ್ ಕುರಿತಾದ ಕಿರಿ ಪರಿಚಯದ ಮಾಹಿತಿಗಳು

- **ಎಂಡೋಸಲ್ಫಾನ್ ಹಿನ್ನಲೆ:- ಎಂಡೋಸಲ್ಫಾನ್ ಸಿಂಪಡಣೆಗೆ ಕಾರಣ, ಪ್ರಾರಂಭ, ತೊಂದರೆಗೊಳಗಾದ ಪ್ರದೇಶಗಳು ಮುಂತಾದ ವಿಷಯಗಳ ಬಗ್ಗೆ ಸಂಕ್ಷಿಪ್ತ ಚಿತ್ರಿಕರಣದ ಮಾಹಿತಿಗಳು**

ಉತ್ತರ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ಗೇರು ಅಭಿವೃದ್ಧಿ ನಿಗಮ ರವರಿಂದ ಎಂಡೋಸಲ್ಫಾನ್ ಸಿಂಪಡಣೆ ಮಾಡಲಾಗಿತ್ತು. ಗೇರು ನಡುತೋಪು ಪ್ರದೇಶಗಳಲ್ಲಿ ಶಂಕಿತ ಎಂಡೋಸಲ್ಫಾನ್/ ಕ್ರಿಮಿನಾಶಕ ಸಿಂಪಡಣೆಯಿಂದ ಪೀಡಿತರುಗಳ ಸಮಸ್ಯೆ ಉಲ್ಬಣವಾಗಿದ್ದು, ಅಂಕೋಲಾ, ಕುಮಟಾ, ಹೊನ್ನಾವರ, ಭಟ್ಕಳ, ಶಿರಸಿ, ಸಿದ್ದಾಪುರ ತಾಲೂಕುಗಳಲ್ಲಿ ಈ ಸಮಸ್ಯೆ ಕಂಡುಬಂದಿರುತ್ತದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ದಿನಾಂಕ:02-02-2015 ರ ಉಚ್ಚ ನ್ಯಾಯಾಲಯದ ಆದೇಶದ ಪ್ರಕಾರ 31-03-2015ರ ವರೆಗೆ ಅಭಿಯಾನ ರೂಪದಲ್ಲಿ 34 ಶಿಬಿರಗಳನ್ನು ಏರ್ಪಡಿಸಿ 1831+29=1860 ಎಂಡೋಸಲ್ಫಾನ್ ಪೀಡಿತರನ್ನು 25% ಕಡಿಮೆ ಅಂಗವಿಕಲತೆ ಇರುವವರು, 25%-59% ಅಂಗವಿಕಲತೆ ಇರುವವರು. 60% ಮೇಲ್ಪಟ್ಟು ಅಂಗವಿಕಲತೆ ಇರುವ ಪೀಡಿತರೆಂದು ಗುರುತಿಸಲಾಗಿದೆ. ಪ್ರಸ್ತುತ ಸಾಲಿನಲ್ಲಿ 1661+29=1690 ಎಂಡೋಸಲ್ಫಾನ್ ಪೀಡಿತರು ಜೀವಂತವಾಗಿದ್ದಾರೆ.

## ➢ ಸರ್ಕಾರದಿಂದ ರೂಪಿಸಲಾದ ಕಾರ್ಯಕ್ರಮಗಳು:-

1. ಉತ್ತರ ಕನ್ನಡ ಜಿಲ್ಲೆಯಲ್ಲಿ 1690 ಸಂತ್ರಸ್ತರಿಗೆ ಉಚಿತ ಹೆಚ್ಚಿನ ವೈದ್ಯಕೀಯ ಚಿಕಿತ್ಸೆಯನ್ನು ಮಣಿಪಾಲ ಆಸ್ಪತ್ರೆಯ ಮೂಲಕ ನೀಡಲಾಗುತ್ತಿದೆ.
2. ಎಂಡೋಸಲ್ಫಾನ್ ಕಾರ್ಯಕ್ರಮದಡಿ ನಾಲ್ಕು ಸಂಚಾರಿ ಆರೋಗ್ಯ ಘಟಕಗಳನ್ನು ದಿನಾಂಕ:26-03-2018 ರಿಂದ  ಜಿಲ್ಲೆಯಲ್ಲಿ 4 ಸಂಚಾರಿ ಆರೋಗ್ಯ ಘಟಕಗಳಿಂದ ವೈದ್ಯಕೀಯ ಚಿಕಿತ್ಸೆಯನ್ನು ಮನೆ ಬಾಗಿಲಿಗೆ ಹೋಗಿ ನೀಡಲಾಗುತ್ತಿತ್ತು. ಪ್ರಸ್ತುತ 2021-22 ನೇ ಸಾಲಿನಲ್ಲಿ ಹೊಸ ಮಾರ್ಗಸೂಚಿಯಂತೆ ಆರು ತಾಲೂಕುಗಳಿಗೆ 6 ಸಂಚಾರಿ ಆರೋಗ್ಯ ಘಟಕಗಳಿಂದ ವೈದ್ಯಕೀಯ ಚಿಕಿತ್ಸೆಯನ್ನು ಮನೆ ಬಾಗಿಲಿಗೆ ಹೋಗಿ ನೀಡುತ್ತಿದ್ದಾರೆ.
3. 1831 ಜನರಿಗೆ ಮಾಸಿಕ ಮಿತವೇತನವನ್ನು ಸರ್ಕಾರದ ಮಾರ್ಗಸೂಚಿಯನ್ವಯ ಕಂದಾಯ ಇಲಾಖೆಯಿಂದ ಪಿಂಚಣಿ ನೀಡಲಾಗುತ್ತಿದೆ.
4. ಎಂಡೋಸಲ್ಫಾನ್ ಪೀಡಿತರಿಗೆ ಹಾಗೂ ಅವರ ಜೊತೆ ಒಬ್ಬ ಪ್ರಯಾಣಿಕರಿಗೆ ಉಚಿತ ಬಸ್ ಪಾಸ್ ಸಾರಿಗೆ ಸಂಸ್ಥೆಯಿಂದ ನೀಡಲಾಗಿದೆ.

- **2021–22ನೇ ಸಾಲಿಗೆ ಮುಂದುವರೆಸಬಹುದಾದ ಕಾರ್ಯಕ್ರಮಗಳು ಹಾಗೂ ಅನುಷ್ಠಾನಗೊಳಿಸಬಹುದಾದ ಹೆಚ್ಚುವರಿ ಕಾರ್ಯಕ್ರಮಗಳು ಪ್ರತಿ ತಾಲೂಕುಗಳಿಗೆ ಒಂದರಂತೆ ಅಂಕೋಲಾ, ಕುಮಟಾ, ಹೊನ್ನಾವರ, ಭಟ್ಕಳ, ಶಿರಸಿ, ಸಿದ್ಧಾಪುರ**

  **ಅನುಷ್ಠಾನ ಗೊಂಡ ಕಾರ್ಯಕ್ರಮಗಳು:–** ಸಂಚಾರಿ ಆರೋಗ್ಯ ಘಟಕ–6 (Agrement on 03-07-2021)

  **ಅನುಷ್ಠಾನಗೊಳಿಸಬೇಕಾದ ಕಾರ್ಯಕ್ರಮ:–** ವಾಹನದಲ್ಲಿ ಫಿಜಿಯೋಥೇರಪಿ ಘಟಕ ಹಾಗೂ ವೈದ್ಯರ ವ್ಯವಸ್ಥೆ ಕಲ್ಪಿಸುವುದು.

  ಪಾಲನಾ ಕೇಂದ್ರ –2